# ಕರ್ನಾಟಕ ವಿಧಾನ ಪರಿಷತ್ತು

1. ಸದಸ್ಯರ ಹೆಸರು : ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
2. ಚುಕ್ಕೆ ಗುರುತ್ತಿನ ಪ್ರಶ್ನೆ ಸಂಖ್ಯೆ : 1053
3. ಉತ್ತರಿಸಬೇಕಾದ ದಿನಾಂಕ : 23-02-223

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಲ್ಲಿ ರಾಯಚೂರು ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಖರ್ಚಾದ ಅನುದಾನವೆಷ್ಟು (ತಾಲ್ಲೂಕುವಾರು ವಿವರ ನೀಡುವುದು) | ಮಾಹಿತಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. |
| ಆ) | ದೇವದುರ್ಗ ತಾಲ್ಲೂಕಿನಲ್ಲಿ ಉದ್ಯೋಗ ಖಾತರಿ ಯೋಜನೆಗೆ ಇನ್ನುಳಿದ ತಾಲ್ಲೂಕುಗಳಿಗಿಂತ ಹೆಚ್ಚು ಅನುದಾನ ಖರ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ. ಹಾಗಿದ್ದಲ್ಲಿ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿರುವ ಅನುದಾನದ ಖರ್ಚಿನಲ್ಲಿ ವ್ಯತ್ಯಾಸವಾಗಿರುವುದಕ್ಕೆ ಕಾರಣವೇನು. | ರಾಯಚೂರು ಜಿಲ್ಲೆಯಲ್ಲಿ ಒಟ್ಟು 7 ತಾಲ್ಲೂಕುಗಳಿದ್ದು, 1. ದೇವದುರ್ಗ ತಾಲ್ಲೂಕಿನಲ್ಲಿ 33 ಗ್ರಾಮ ಪಂಚಾಯಿತಿಗಳು 2. ಲಿಂಗಸೂಗೂರು ತಾಲ್ಲೂಕಿನಲ್ಲಿ 21 ಗ್ರಾಮ ಪಂಚಾಯಿತಿಗಳು 3. ರಾಯಚೂರು ತಾಲ್ಲೂಕಿನಲ್ಲಿ 34 ಗ್ರಾಮ ಪಂಚಾಯಿತಿಗಳು 4. ಮಸ್ಕಿ ತಾಲ್ಲೂಕಿನಲ್ಲಿ 21 ಗ್ರಾಮ ಪಂಚಾಯಿತಿಗಳು 5. ಮಾನ್ವಿ ತಾಲ್ಲೂಕಿನಲ್ಲಿ 17 ಗ್ರಾಮ ಪಂಚಾಯಿತಿಗಳು 6. ಸಿಂಧನೂರು ತಾಲ್ಲೂಕಿನಲ್ಲಿ 30 ಗ್ರಾಮ ಪಂಚಾಯಿತಿಗಳು 7. ಶಿರವಾರ ತಾಲ್ಲೂಕಿನಲ್ಲಿ 14 ಗ್ರಾಮ ಪಂಚಾಯಿತಿಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ ದೇವದುರ್ಗ ತಾಲ್ಲೂಕಿನಲ್ಲಿ 69,313 ಕುಟುಂಬಗಳಿದ್ದು, ಉಳಿದ ತಾಲ್ಲೂಕುಗಳಿಗಿಂತ ಹೆಚ್ಚಾಗಿರುತ್ತದೆ.<br>ಗ್ರಾಮ ಪಂಚಾಯಿತಿಗಳು ತಮ್ಮಲ್ಲಿರುವ ಜಾಬ್‌ಕಾರ್ಡ್‌ಗಳ ಸಂಖ್ಯೆ ಮತ್ತು ಕೆಲಸದ ಬೇಡಿಕೆಗೆ ಅನುಗುಣವಾಗಿ ನರೇಗಾ ಯೋಜನೆಯಡಿ ವೆಚ್ಚ ಮಾಡಲು ಅವಕಾಶ ಇರುತ್ತದೆ. ದೇವದುರ್ಗ ತಾಲ್ಲೂಕಿನ ಬಹುತೇಕ ಗ್ರಾಮ ಪಂಚಾಯಿತಿಗಳಲ್ಲಿ ಯೋಜನೆಯಡಿ ಕೂಲಿಕಾರರಿಂದ ಕೆಲಸದ ಬೇಡಿಕೆ ಹೆಚ್ಚಿದ್ದು, ಕೂಲಿಕಾರರಿಗೆ ಕೆಲಸ ಒದಗಿಸಲು ಹೆಚ್ಚಿನ ಅನುದಾನ ವೆಚ್ಚವಾಗಿರುತ್ತದೆ. ಕೆಲವು ಗ್ರಾಮ ಪಂಚಾಯಿತಿಗಳು ಅಮೃತ ಗ್ರಾಮ ಪಂಚಾಯಿತಿ ಯೋಜನೆಯಡಿ ಆಯ್ಕೆಯಾಗಿದ್ದು, ಸಮಗ್ರ ಮೂಲಸೌಕರ್ಯ ಮತ್ತು ಶಾಲಾ ಅಭಿವೃದ್ಧಿ ಕಾಮಗಾರಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕೈಗೊಂಡು ಹೆಚ್ಚಿನ ವೆಚ್ಚ ಭರಿಸಿರುತ್ತಾರೆ. ಆದಾಗ್ಯೂ, ದೇವದುರ್ಗ ತಾಲ್ಲೂಕಿನ ಗ್ರಾಮ ಪಂಚಾಯಿತಿಗಳು ಯೋಜನೆಯಡಿ ಉಳಿದ ತಾಲ್ಲೂಕುಗಳಿಗಿಂತ ಹೆಚ್ಚಿನ ಅನುದಾನ ಖರ್ಚು ಮಾಡಿರುವುದರಿಂದ, ವೆಚ್ಚಕ್ಕೆ ಅನುಗುಣವಾಗಿ ಕಾಮಗಾರಿಗಳು ಅನುಷ್ಠಾನವಾಗಿರುವುದನ್ನು ಪರಿಶೀಲಿಸಲು ಗುಣನಿಯಂತ್ರಣ ಮಾನಿಟರ್ ರವರಿಂದ ತಪಾಸಣೆಗೆ ಆದೇಶಿಸಲಾಗಿದೆ. |
| ಇ) | ದೇವದುರ್ಗ ತಾಲ್ಲೂಕಿನಲ್ಲಿ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ನಿಯಮಗಳನ್ನು ಉಲ್ಲಂಘನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ. | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |

| | | |
|---|---|---|
| ಈ) | ಹಾಗಿದ್ದಲ್ಲಿ ಈ ಕುರಿತು ಉನ್ನತ ಮಟ್ಟದ ತನಿಖೆ ಮಾಡಲು ಸರ್ಕಾರಕ್ಕೆ ಇರುವ ತೊಂದರೆಯೇನು. ಇಲ್ಲದಿದ್ದಲ್ಲಿ ಕಳೆದ 3 ವರ್ಷಗಳ ದೇವದುರ್ಗ ತಾಲ್ಲೂಕಿನ ಉದ್ಯೋಗ ಖಾತರಿ ಯೋಜನೆಯ ಅವ್ಯವಹಾರವನ್ನು ಯಾವಾಗ ತನಿಖೆ ಮಾಡಲಾಗುವುದು? (ವಿವರ ನೀಡುವುದು) | 2022-23ನೇ ಸಾಲಿನಲ್ಲಿ ಕೈಗೊಳ್ಳಲಾದ ಕಾಮಗಾರಿಗಳನ್ನು ಪರಿಶೀಲಿಸಿ ವರದಿಯನ್ನು ನೀಡಲು ದೇವದುರ್ಗ ತಾಲ್ಲೂಕಿನ 16 ಗ್ರಾಮ ಪಂಚಾಯತಿಗಳಿಗೆ ರಾಜ್ಯ ಗುಣ ನಿಯಂತ್ರಣ ಮಾನಿಟರ್ ರವರನ್ನು ನಿಯೋಜಿಸಲಾಗಿದೆ. ತನಿಖೆ ಪ್ರಗತಿಯಲ್ಲಿದೆ. ಉಳಿಕೆ 2 ವರ್ಷಗಳ ಮಾಹಿತಿಯನ್ನು ರಾಯಚೂರು ಜಿಲ್ಲಾ ಪಂಚಾಯತಿಯಿಂದ ಪಡೆದು ತನಿಖೆಗೆ ಕ್ರಮವಹಿಸಲಾಗುವುದು. |

ಸಂಖ್ಯೆ: ಗ್ರಾಅಪ/103(9)/ಉಖಾಯೋ/2023

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿಗಳು

ಅನುಬಂಧ - 1.

| Raichur district Expenditure on Wage and Material in last 3 Financial Years | | | | | | | | | | |
|---|---|---|---|---|---|---|---|---|---|---|
| | | Expenditure(Rs in lakhs) | | | | | | | | |
| | | FY 2020-21 | | | FY 2021-22 | | | FY 2022-23 | | |
| Sl.No | Block name | Wage | Material | Total | Wage | Material | Total | Wage | Material | Total |
| 1 | DEVADURGA | 5537.18 | 3083.29 | 8620.47 | 7817.75 | 2762.98 | 10580.73 | 6717.71 | 5339.92 | 12057.63 |
| 2 | LINGSUGUR | 4106.32 | 1430.95 | 5537.27 | 5165.4 | 1685.61 | 6851.01 | 3800.23 | 1901.35 | 5701.58 |
| 3 | MANVI | 3614.92 | 1307.2 | 4922.12 | 3386.17 | 1089.58 | 4475.75 | 3228.79 | 1284.42 | 4513.21 |
| 4 | MASKI | 4260.27 | 1470.04 | 5730.31 | 5024.83 | 1520.97 | 6545.8 | 3772.14 | 1554.35 | 5326.49 |
| 5 | RAICHUR | 4247.43 | 3804.36 | 8051.79 | 5209.76 | 2634.1 | 7843.86 | 3617.12 | 2942.44 | 6559.56 |
| 6 | SINDHNUR | 5392.73 | 3018.75 | 8411.48 | 5725.32 | 2305.33 | 8030.65 | 4571.35 | 1593.42 | 6164.77 |
| 7 | SIRAWARA | 2592.6 | 633.41 | 3226.01 | 2392.19 | 522.05 | 2914.24 | 1693.98 | 671.12 | 2365.1 |
| | **Total** | **29751.45** | **14748** | **44499.45** | **34721.42** | **12520.62** | **47242.04** | **27401.32** | **15287.02** | **42688.34** |

Deputy Secretary
Zilla Panchayat, R...

# ಪೂರಕ ಟಿಪ್ಪಣಿ

ರಾಯಚೂರು ಜಿಲ್ಲೆಯಲ್ಲಿ 7 ತಾಲ್ಲೂಕುಗಳಿದ್ದು, ಒಟ್ಟು 179 ಗ್ರಾಮ ಪಂಚಾಯಿತಿಗಳಿರುತ್ತವೆ. ತಾಲ್ಲೂಕುವಾರು ಗ್ರಾಮ ಪಂಚಾಯಿತಿಗಳ ವಿವರ, ಮನೆಗಳ ಸಂಖ್ಯೆ, ಕೂಲಿಕಾರ್ಮಿಕರ ಸಂಖ್ಯೆ, ಇತ್ಯಾದಿ ವಿವರ ಕೆಳಕಂಡಂತಿದೆ.

| Raichur district Job cad Statistics as on 17.02.2023 | | | | | | |
|---|---|---|---|---|---|---|
| Sl.No | Block name | No. of GPs | Total households | No.of Active Job cards | No. of Active Workers | Remarks |
| 1 | DEVADURGA | 33 | 69313 | 48588 | 87529 | |
| 2 | LINGSUGUR | 30 | 52915 | 40633 | 75389 | |
| 3 | MANVI | 17 | 38726 | 32184 | 78142 | |
| 4 | MASKI | 21 | 36526 | 33006 | 74265 | |
| 5 | RAICHUR | 34 | 63302 | 45608 | 88592 | |
| 6 | SINDHNUR | 30 | 55483 | 48874 | 107819 | |
| 7 | SIRAWARA | 14 | 29545 | 23581 | 50904 | |
| | Total | 179 | 345810 | 272474 | 562640 | |

ದೇವದುರ್ಗ ತಾಲ್ಲೂಕಿನಲ್ಲಿ 33 ಗ್ರಾಮ ಪಂಚಾಯಿತಿಗಳಿದ್ದು, ಕಳೆದ 3 ವರ್ಷಗಳಲ್ಲಿ 86+105+120=311.00 ಕೋಟಿಗಳು ವೆಚ್ಚವಾಗಿದ್ದು, 2022-23ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಕೈಗೊಳ್ಳಲಾದ ಕಾಮಗಾರಿಗಳಿಗೆ ಸಂಘ ಸಂಸ್ಥೆಗಳಿಂದ ದೂರು ಸ್ವೀಕರಿಸಿದ್ದು, ಅತೀ ಹೆಚ್ಚು ವೆಚ್ಚವಾಗಿರುವ 16 ಗ್ರಾಮ ಪಂಚಾಯಿತಿಗಳಲ್ಲಿ ಕಾಮಗಾರಿಗಳನ್ನು ತನಿಖೆಗೆ ಆದೇಶಿಸಿದ್ದು, ತನಿಖೆ ಪ್ರಗತಿಯಲ್ಲಿರುತ್ತದೆ. ತನಿಖೆಯಲ್ಲಿ ಲೋಪದೋಷಗಳು ಕಂಡು ಬಂದಲ್ಲಿ, ನಿಯಮಾನುಸಾರ ಕ್ರಮವಹಿಸಲಾಗುವುದು. ಇನ್ನುಳಿದ ವರ್ಷಗಳಲ್ಲಿ ತನಿಖೆ ಕೈಗೊಂಡು ವರದಿಯನ್ನು ನೀಡುವಂತೆ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಅನುಷ್ಠಾನ ಅಧಿಕಾರಿಗಳಾದ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ರಾಯಚೂರು ರವರಿಗೆ ತಿಳಿಸಲಾಗಿದೆ.

9.4.

**ಜಂಟಿ ನಿರ್ದೇಶಕರು (ತಾಂತ್ರಿಕ)**
**ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**